# ರಾಜದ್ರೋಹಿ

■ ಮಲ್ಲಿಕಾರ್ಜುನ ಶೆಲ್ಲಿಕೇರಿ
ಕಲೆ: ರಘುಪತಿ ಶೃಂಗೇರಿ



ದೊರೆ ಇಮ್ಮಡಿ ಪುಲಕೇಶಿಯ ಸಹನೆಯ ಕಟ್ಟೆಯೊಡೆದಿತ್ತು. ತನ್ನ ಸಾಮ್ರಾಜ್ಯದಲ್ಲಿಯೇ ಇಂತಹದೊಂದು ಅಮಾನವೀಯ ಘಟನೆ ನಡೆದಿದೆಯಲ್ಲ ಎಂದು ಮನಸಿಗೆ ಖೇದವೆನಿಸಿ ಬೇಸರವೂ ತುಂಬಿಕೊಂಡಿತ್ತು. ತನ್ನ ಪ್ರಜೆಗಳು ಸದಾ ಶಾಂತಿ, ನೆಮ್ಮದಿ, ಸಂತೋಷದಿಂದ ಇರಬೇಕೆಂದು ಬಯಸುವ 'ದಕ್ಷಿಣಾಪಥೇಶ್ವರ'ನಿಗೆ ಈ ಘಟನೆಯನ್ನು ಅರಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಸಾಮಾನ್ಯವಾಗಿ ಚಿಕ್ಕಪುಟ್ಟ ವಿಷಯಗಳಿಗೆ ಕೋಪಗೊಳ್ಳದ ರಾಜ ಪುಲಕೇಶಿ ಇಂತಹ ಹೇಯ ಕೃತ್ಯ ತಮ್ಮ ಸೇನಾಧಿಪತಿಯಿಂದಲೇ ನಡೆದಿದ್ದು, ಇನ್ನಷ್ಟು ಕ್ರೋಧಗೊಳ್ಳಲು ಕಾರಣವಾಗಿತ್ತು. ಹಲ್ಲೆಗೊಳಗಾದ ವ್ಯಕ್ತಿಯ ದಯನೀಯ ಸ್ಥಿತಿಯು ಕೆಂಡಾಮಂಡಲವಾಗುವಂತೆ ಮಾಡಿತ್ತು. ಈ ಘಟನೆ ಸ್ವತಃ ತಮ್ಮ ಗಮನಕ್ಕೆ ಬರದಿದ್ದರೆ ಅದೆಂಥ ಅಚಾತುರ್ಯ ಆಗುತ್ತಿತ್ತಲ್ಲ ಎಂದು ನೆನಪಿಸಿಕೊಂಡು ಮನಸು ಕಳವಳಗೊಂಡಿತು. ಜೊತೆಗೆ ಈ ಘಟನೆಯ ಹಿಂದಿನ ಕಾರಣ, ಸೇನಾಧಿಪತಿಯ ಕುತಂತ್ರವನ್ನು ಮಂತ್ರಿ ಹಾಗೂ ಕವಿ ರವಿಕೀರ್ತಿಯು ಎಳೆಎಳೆಯಾಗಿ ಹೇಳಿಯಾಗಿತ್ತು. ರವಿಕೀರ್ತಿ ಹೇಳಿದ ವಿಷಯಗಳಿಂದ ಘಟನೆಯ ಬಗ್ಗೆ ಇನ್ನು ವಿಳಂಬ ಮಾಡಿದರೆ ಮತ್ತಾವ ಅವಘಡ ಜರುಗುವುದೋ ಎಂಬ ಆತಂಕವು ಮನಸಿನಲ್ಲಿ ಮನೆಮಾಡಿತ್ತು.

ಅಲ್ಲದೆ ಸೇನಾಧಿಪತಿ ವೀರಾದಿತ್ಯ ವೆಂಗಿ ದೊರೆ ಸಹೋದರ ವಿಷ್ಣುವರ್ಧನನಿಗೆ ತುಂಬಾ ಆಪ್ತವಾಗಿರುವುದು ಸಮಸ್ಯೆಯು ಇನ್ನಷ್ಟು ಜಟಿಲವಾಗಲು ಕಾರಣವಾಗಿತ್ತು. ಏಕೆಂದರೆ ವೀರಾದಿತ್ಯನ ಈ ಕೃತ್ಯವನ್ನು ವಿಷ್ಣುವರ್ಧನ ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವನಲ್ಲ. ಏಕಪಕ್ಷೀಯವಾಗಿ ವೀರಾದಿತ್ಯನಿಗೆ ಶಿಕ್ಷೆ ವಿಧಿಸುವುದು ಸೂಕ್ತವೂ ಆಗಿರಲಿಲ್ಲ. ಮೊದಲು ಈ ವಿಷಯವನ್ನು ಸಹೋದರನಿಗೆ ಮನದಟ್ಟು ಮಾಡಿ ನಂತರ ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಬೇಕಾಯಿತು. ಅಲ್ಲದೆ ವೆಂಗಿಯ ಯಾವುದೋ ವಿಷಯವೊಂದನ್ನು ಚರ್ಚಿಸಲು ಸ್ವತಃ ವಿಷ್ಣುವರ್ಧನ ವಾತಾಪಿಗೆ ಬರುತ್ತಿರುವುದು ಈ ವಿಷಯದ ಬಗ್ಗೆ ಕೂಡಲೇ ಅವನಲ್ಲಿ ಪ್ರಸ್ತಾಪಿಸಲು ಅನುಕೂಲವೇ ಆಗಿತ್ತು. ಅಲ್ಲದೆ ವಿಷಯ ತುಂಬಾ ಸೂಕ್ಷ್ಮವಾಗಿರುವುದರಿಂದ ಮೊದಲು ತಮ್ಮ ಅಂತರಂಗ ಬಳಗದ ರಾಜ ಹಿತೈಷಿಗಳ ಸಮ್ಮುಖದಲ್ಲಿ ಚರ್ಚಿಸುವುದು. ನಂತರ ಆಸ್ಥಾನದ ಸಭೆಯ ಮುಂದೆ ಎಲ್ಲರ ಸಮಕ್ಷಮ ಈ ವಿಷಯವನ್ನು ಇತ್ಯರ್ಥಪಡಿಸುವುದು ಸಮಂಜಸವೆಂದು ಆಲೋಚನೆ ಮಾಡಿ ಆ ಕಾರಣದಿಂದಲೇ ಕೂಡಲೇ ಖಾಸಗಿ ಸಭೆಯೊಂದನ್ನು ಏರ್ಪಡಿಸುವಂತೆ ರವಿಕೀರ್ತಿಯನ್ನು ಕರೆದು ಮಾತನಾಡಿದ್ದು. ಯಾವುದೇ ಕಾರಣದಿಂದಲೂ ಒಬ್ಬ ಅಮಾಯಕನಿಗೆ ಅನ್ಯಾಯವಾಗಬಾರದೆಂಬ ದೊರೆಯ ಮನಸಿನ ಇಂಗಿತವನ್ನು ಅರಿತ ರವಿಕೀರ್ತಿಯು ತಕ್ಷಣ ವಿಷಯದ ಬಗ್ಗೆ ಗಮನಹರಿಸಲು 'ಅಪ್ಪಣೆ ಪ್ರಭು' ಎಂದು ಅಂತಃಪುರದಿಂದ ನಿರ್ಗಮಿಸಿದನು. ರವಿಕೀರ್ತಿ ಅಲ್ಲಿಂದ ಹೋದ ನಂತರ ಅದೇ ವಿಷಯದಲ್ಲಿಯೇ